ಬಳ್ಳಾರಿ ಜಿಲ್ಲೆಯ ತೋರಣಗಲ್ಲು ಗ್ರಾಮದ ಚಂದ್ರಕಾಂತ ವಡ್ಡು ಎರಡು ದೋಣಿಗಳ ಪಯಣಿಗರು. ಪತ್ರಿಕೋದ್ಯಮ ಹಾಗೂ ಸಾಹಿತ್ಯ ಅವರು ತೊಡಗಿಕೊಂಡಿರುವ ಎರಡು ಸೃಜನಶೀಲ ಕ್ಷೇತ್ರಗಳು. 'ಬಿಸಿಲ ಬದುಕು' ಹೆಸರಿನ ನಿಯತಕಾಲಿಕ ಸಂಪಾದಿಸಿದ್ದ ಅವರೀಗ, 'ಸಮಾಜಮುಖಿ' ಮಾಸಿಕದ ಮೂಲಕ ಸಹೃದಯರೊಂದಿಗೆ ಸೃಜನಶೀಲ ಸಂವಾದ ನಡೆಸುತ್ತಿದ್ದಾರೆ. ಸಂಪಾದಿತ ಬರಹಗಳ 'ಸೌಹಾರ್ದ ಕರ್ನಾಟಕ' ಹಾಗೂ ಅಂಕಣ ಬರಹಗಳ 'ಸಮಕಾಲೀನ' ಪ್ರಮುಖ ಪ್ರಕಟಿತ ಕೃತಿಗಳು.

ಆಮಂತ್ರಣ ಪತ್ರಿಕೆಯ ಚಿತ್ರ ನೂರಾರು ಸಂದೇಶಗಳಲ್ಲಿ ಒಂದಾಗಿ ಪ್ರತಿಯೊಬ್ಬರ ಖಾತೆ ತಲುಪುವುದೇ ಹೊರತು ಅದರೊಳಗಿನ ಅಕ್ಷರ ಯಾರ ಎದೆಗೂ ಬೀಳುವುದಿಲ್ಲ!

ಇದು ಅನುಭವೀ ಲೇಖಕರ ಸೂಕ್ಷ್ಮಮತಿಗೆ ಹೊಳೆಯದ ಸಂಗತಿಯೇನಲ್ಲ. ಹಾಗಾಗಿಯೇ ಅವರು ಪುಸ್ತಕ ಬಿಡುಗಡೆಗೆ ಮೂರುದಿನ ಮುಂಚಿನಿಂದ ಬಂಧುಮಿತ್ರರಿಗೆ ಮೊಬೈಲ್ ಕರೆ ಮಾಡಿ ವೈಯಕ್ತಿಕವಾಗಿ ಆಹ್ವಾನಿಸಲು ಆರಂಭಿಸುತ್ತಾರೆ. ಮೊಬೈಲ್ ಕರೆ ಮೂಲಕ ವಿಶೇಷವಾಗಿ ಕರೆಯುವುದು ಗೆಳೆಯರ ವಲಯದಲ್ಲಿ ಒಂದಿಷ್ಟು ಫಲ ನೀಡುತ್ತದೆ. ಆದರೆ, ಮದುವೆಮುಂಜಿ ಸಂದರ್ಭದಲ್ಲಿ ಸೀರೆ, ವಸ್ತ್ರ, ಅರಿಶಿಣ-ಕುಂಕುಮ ಸಹಿತ ಆಹ್ವಾನ ಸ್ವೀಕರಿಸುವುದಕ್ಕೆ ಒಗ್ಗಿಕೊಂಡಿರುವ ಬಂಧುಗಳಿಗೆ ಮೊಬೈಲ್ ಆಹ್ವಾನ ಅಷ್ಟೇನೂ ಆಸಕ್ತಿ ಹುಟ್ಟಿಸಲಾರದು.

ಕಾರ್ಯಕ್ರಮಕ್ಕೆ ಅತಿಥಿಗಳನ್ನು ಆಹ್ವಾನಿಸುವಾಗಲೇ ಹೆಚ್ಚಿನ ಅಭಿಮಾನಿಗಳನ್ನು ಹೊಂದಿದ ಹಾಗೂ ಸಭಿಕರನ್ನು ಸೆಳೆಯಬಲ್ಲ ಜನಪ್ರಿಯ ಗಣ್ಯರನ್ನು ಆಯ್ಕೆ ಮಾಡುವ ಜಾಣತನವನ್ನು ಕೆಲವರು ಪ್ರದರ್ಶಿಸುತ್ತಾರೆ. ಮರುದಿನ ಪತ್ರಿಕೆಗಳಲ್ಲಿ ದೊಡ್ಡದಾಗಿ ಪ್ರಚಾರ ಸಿಗಬೇಕಾದರೆ ಯಾರನ್ನು ಕರೆಯಬೇಕು, ಪುಸ್ತಕದ ಬಗ್ಗೆ ಒಳ್ಳೆಯ ವಿಮರ್ಶೆಗೆ ಯಾರನ್ನು ಆಮಂತ್ರಿಸಿದರೆ ಅನುಕೂಲ ಎಂಬ ಲೆಕ್ಕಾಚಾರವನ್ನು ಈಗ ಎಲ್ಲರೂ ಕಲಿತಾಗಿದೆ. ಮುಖ್ಯ ಅತಿಥಿಗಳ ಪಟ್ಟಿಯ ಕೊನೆಯಲ್ಲಿ '...ಮತ್ತು ನೀವು' ಎಂದು ಸೇರಿಸುವ ಮೂಲಕ ಆಹ್ವಾನಿತನಿಗೆ ತಾನೂ ಮುಖ್ಯ ಎಂಬ ಭಾವನೆ ಅಥವಾ ಭ್ರಮೆ ಹುಟ್ಟಿಸಿ ಕಾರ್ಯಕ್ರಮಕ್ಕೆ ಸೆಳೆಯುವ ಪ್ರಯೋಗ ಮಾಡುವುದು ಸಾಮಾನ್ಯ. ಇತ್ತೀಚೆಗೆ ಇವೆಲ್ಲವೂ ಸರ್ಕಾರದ ಪ್ರೋಟೋಕಾಲ್ ಆಮಂತ್ರಣ ಪತ್ರಿಕೆಯಂತೆ ಮಾಸಲು ಎನ್ನಿಸತೊಡಗಿವೆ. 'ಪುಸ್ತಕ ಬಿಡುಗಡೆ ನೆಪ ಮಾತ್ರ, ಹಳೆಯ-ಹೊಸ ಗೆಳೆಯರೆಲ್ಲಾ ಸೇರೋಣ, ಬನ್ನಿ' ಎಂದು ಕರೆಯುವಾಗ, ಬಿಡುಗಡೆಯನ್ನು ಗೌಣವಾಗಿಸುವ ಗುಣ ಕಾಣಿಸುತ್ತದೆ. ಅಲ್ಲದೆ, ಅದರಲ್ಲಿ ಪುಸ್ತಕ ಬಿಡುಗಡೆ ಕುರಿತ ಸಹೃದಯರ ನಿರಾಸಕ್ತಿಯ ಅರಿವು ಸಂಘಟಕರಿಗಿರುವುದು ಪ್ರಕಟವಾಗುತ್ತದೆ.

ಸಾಮಾನ್ಯವಾಗಿ ಇಂಥ ಕಾರ್ಯಕ್ರಮಗಳನ್ನು ವಾರಾಂತ್ಯದ ರಜಾ ದಿನಗಳಲ್ಲಿ ಹಮ್ಮಿಕೊಳ್ಳಲಾಗುತ್ತದೆ. ಇಲ್ಲೂ ಒಂದು ಗೊಂದಲವಿದೆ. ಕೆಲಸದದಿನ ಇಟ್ಟುಕೊಂಡರೆ ಹೇಗೆ ಬರುವುದು ಎಂದು ಜಾರಿಕೊಳ್ಳುವವರು ಇರುವಂತೆ, ಸಿಗುವ ಒಂದು ರಜಾದಿನ ಆರಾಮಾಗಿ ಕಳೆಯಲು ಬಿಡಬಾರದೇ ಎಂದು ಗೊಣಗುವವರೂ ಕಾಣಸಿಗುತ್ತಾರೆ. ರಜಾದಿನದ ಸಂಜೆಗಳನ್ನು ಜನ ಕುಟುಂಬದೊಂದಿಗೆ ಕಳೆಯಲು ಮೀಸಲಿಡುವುದರಿಂದ ಬಿಡುಗಡೆಗೆ ದಿನದ ಪೂರ್ವಾರ್ಧ ನಿಗದಿಪಡಿಸುವುದು ಅನಿವಾರ್ಯ. ಹತ್ತರಿಂದ ಒಂದು ಗಂಟೆಯ ಸಮಯ ಆಯೋಜಕರ ದೃಷ್ಟಿಯಿಂದ ಅನುಕೂಲಕರ. ಅಷ್ಟರೊಳಗೆ ಕಾರ್ಯಕ್ರಮ ಮುಗಿಸಿದರೆ ಮಧ್ಯಾಹ್ನದ ಊಟದ ಖರ್ಚು ಉಳಿಯುತ್ತದೆ. ಆದರೆ, ರಜಾದಿನದ ಬೆಳಗ್ಗೆ ಹೆಚ್ಚುಹೊತ್ತು ಮಲಗುವುದನ್ನು ದೇಹ, ಮನಸ್ಸು ಮತ್ತು ಅರ್ಧಕ್ಕೆ ನಿಂತ ಕನಸುಗಳು ಬಯಸುತ್ತವೆ. ಬೆಂಗಳೂರಿನಂತಹ ಮಹಾನಗರದಲ್ಲಿ ಸಂಚಾರ ದಟ್ಟಣೆಯ ಚಕ್ರವ್ಯೂಹ ಭೇದಿಸಿ ಸಕಾಲದಲ್ಲಿ ಗಮ್ಯಸ್ಥಾನ ತಲುಪುವುದು ಕೂಡ ಅಭಿಮನ್ಯು ಸಾಹಸವೇ ಸರಿ. ಹಾಗಾಗಿ ಸಮಯಕ್ಕೆ ಸರಿಯಾಗಿ ಕಾರ್ಯಕ್ರಮಕ್ಕೆ ಬರುವವರ ಸಂಖ್ಯೆ ಬಹಳ ಕಡಿಮೆ. ವಿಲಂಬಿತಲಯದ ಶ್ರೋತೃಗಳನ್ನು ಸೆಳೆಯುವ ತಂತ್ರದ ಭಾಗವಾಗಿ, ಆಹ್ವಾನ ಪತ್ರಿಕೆಯಲ್ಲಿ, 'ಅಂದು ಬೆಳಗ್ಗೆ ಒಂಬತ್ತೂವರೆಗೆ ನಿಮ್ಮ ಉಪಾಹಾರ ನಮ್ಮೊಂದಿಗೆ' ಎಂಬ ಆಕರ್ಷಣೆ ಒಡ್ಡುವುದನ್ನು ಕಾಣಬಹುದು,